413 (225) ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ಕೇಂದ್ರ ಸರ್ಕಾರ ಹಾಗೂ ವಿವಿಧ ಮೂಲಗಳಿಂದ ರಾಜ್ಯದಲ್ಲಿನ ತೋಟಗಾರಿಕೆ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರಕ್ಕೆ ಬಂದಿರುವ ಅನುದಾನವೆಷ್ಟು;

ಆ) ಇದನ್ನು ಯಾವ ಯಾವ ಯೋಜನೆಗಳಿಗೆ ವಿನಿಯೋಗಿಸಲಾಗಿದೆ (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು) ;

ಇ) ಈ ಕಾರ್ಯಕ್ರಮಗಳನ್ನು ಯಾವ ಯಾವ ಜಿಲ್ಲೆಗೆ ವಿಸ್ತರಿಸಲಾಗಿದೆ ಸರ್ಕಾರದ ಒಟ್ಟು ಅನುದಾನದಲ್ಲಿ ಸಬ್ಸಿಡಿ ಮತ್ತು ಸಾಲವೆಷ್ಟು (ಹಣದ ವಿವರ ನೀಡುವುದು) ?

**ಶ್ರೀ ಶಶಿಕಾಂತ ಅಕ್ಕಪ್ಪನಾಯಕ್** (ತೋಟಗಾರಿಕೆ ಸಚಿವರು):

ಅ) ಕೇಂದ್ರ ಸರ್ಕಾರ ಹಾಗೂ ವಿವಿಧ ಮೂಲಗಳಿಂದ ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ರಾಜ್ಯಸರ್ಕಾರಕ್ಕೆ 2006–07ನೇ ಸಾಲಿನಲ್ಲಿ ರೂ. 12614.42 ಲಕ್ಷಗಳ ಅನುದಾನ ಬಂದಿರುತ್ತದೆ.

ಆ) ಕೇಂದ್ರ ಸರ್ಕಾರ ಹಾಗೂ ವಿವಿಧ ಮೂಲಗಳಿಂದ ಬಂದಿರುವ ಅನುದಾನವನ್ನು ಕೆಳಕಾಣಿಸಿದ ಯೋಜನೆಗಳಿಗೆ ವಿನಿಯೋಗಿಸಲಾಗಿದೆ.

1. ಸಾಮರ್ಥ್ಯವಿರುವ ರಾಜ್ಯಗಳಲ್ಲಿ ತಾಳೆಬೆಳೆ ವ್ಯವಸಾಯ
2. ತೆಂಗು ಅಭಿವೃದ್ಧಿ ಮಂಡಳಿ ಸಹಾಯದಲ್ಲಿ ಸಮಗ್ರ ತೆಂಗು ಬೇಸಾಯ
3. ರಾಷ್ಟ್ರೀಯ ತೋಟಗಾರಿಕೆ ಮಿಷನ್
4. ಕೇಂದ್ರ ಪುರಸ್ಕೃತ ಸೂಕ್ಷ್ಮ ಹನಿ ನೀರಾವರಿ ಯೋಜನೆಗಳಿಗೆ ವಿನಿಯೋಗಿಸಲಾಗಿದೆ.

ಯೋಜನೆಗಳಿಗೆ ಬಿಡುಗಡೆ ಮಾಡಲಾದ ಅನುದಾನದ, ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ) ಈ ಕಾರ್ಯಕ್ರಮಗಳನ್ನು ವಿಸ್ತರಿಸಲಾದ ಜಿಲ್ಲೆಗಳನ್ನು ಅನುಬಂಧ ದಲ್ಲಿ ನೀಡಲಾಗಿದೆ. ಒಟ್ಟು ಅನುದಾನ ರೂ. 12614.42 ಲಕ್ಷಗಳು ಸಹಾಯಧನವಾಗಿರುತ್ತದೆ. ಸಾಲದ ರೂಪದಲ್ಲಿ ಅನುದಾನ ಬಂದಿರುವುದಿಲ್ಲ.

**ಅನುಬಂಧ**

2006–07ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಹಾಗೂ ವಿವಿಧ ಮೂಲಗಳಿಂದ ರಾಜ್ಯದಲ್ಲಿನ ತೋಟಗಾರಿಕೆ ಅಭಿವೃದ್ಧಿಗಾಗಿ ವಿನಿಯೋಗಿಸಲು ಬಿಡುಗಡೆಮಾಡಲಾದ ಅನುದಾನದ ಜಿಲ್ಲಾವಾರು ವಿವರಗಳು

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಜಿಲ್ಲೆ / ಅನುಷ್ಠಾನಾಧಿಕಾರಿಗಳು | ರಾಷ್ಟ್ರೀಯ ತೋಟಗಾರಿಕೆ ಮಿಷನ್ | ತಾಳೆ ಬೆಳೆ ಅಭಿವೃದ್ಧಿ ಯೋಜನೆ |
|---|---|---|---|
| 1 | ಬೆಂಗಳೂರು ನಗರ | | |
| 2 | ಬೆಂಗಳೂರು (ಗ್ರಾ) | 349.00 | |
| 3 | ಚಿತ್ರದುರ್ಗ | 330.00 | |
| 4 | ಕೋಲಾರ | 298.00 | |
| 5 | ಶಿವಮೊಗ್ಗ | 651.00 | 12.39 |
| 6 | ತುಮಕೂರು | 338.00 | |
| 7 | ದಾವಣಗೆರೆ | | 1.81 |
| 8 | ಮೈಸೂರು | 134.00 | 22.92 |
| 9 | ಚಿಕ್ಕಮಗಳೂರು | 345.00 | 1.40 |
| 10 | ದಕ್ಷಿಣ ಕನ್ನಡ | 174.00 | |
| 11 | ಹಾಸನ | 315.00 | |
| 12 | ಮಂಡ್ಯ | | 1.77 |
| 13 | ಚಾಮರಾಜನಗರ | | 1.250 |
| 14 | ಉಡುಪಿ | 91.00 | |
| 15 | ಬೆಳಗಾಂ | 350.00 | 4.40 |
| 16 | ಉತ್ತರ ಕನ್ನಡ | 176.00 | |
| 17 | ಬಾಗಲಕೋಟೆ | 178.00 | 1.5 |
| 18 | ಬಳ್ಳಾರಿ | | 2.16 |
| 19 | ಬೀದರ್ | | |
| 20 | ಬಿಜಾಪುರ | 305.00 | 1.75 |
| 21 | ಕೊಡಗು | 265.00 | 4.00 |

| | | | |
|---|---|---|---|
| 22 | ಧಾರವಾಡ | | |
| 23 | ಗದಗ್ | | 1.9 |
| 24 | ಗುಲ್ಬರ್ಗಾ | 170.00 | 0.75 |
| 25 | ಹಾವೇರಿ | | 1.40 |
| 26 | ಕೊಪ್ಪಳ | 196.00 | 9.12 |
| 27 | ರಾಯಚೂರು | | |
| 28 | ಅಪರನಿರ್ದೇಶಕರು ತಾಳೆಬೆಳೆ(ಬೆಂ) | | 257.33 |
| 29 | ಕಾಯ್ದಿರಿಸಿದ ಮೊತ್ತ | 3683.00 | |
| | ಒಟ್ಟು | 8348.00 | 325.85 |

| ಕ್ರ. ಸಂ. | ಜಿಲ್ಲೆ / ಅನುಷ್ಠಾನಾಧಿಕಾರಿಗಳು | ತೆಂಗು ಅಭಿವೃದ್ಧಿ ಯೋಜನೆ | ಸೂಕ್ಷ್ಮ ಹನಿ ನೀರಾವರಿ | ಒಟ್ಟು |
|---|---|---|---|---|
| 1 | ಬೆಂಗಳೂರು ನಗರ | 14.12 | 33.55 | 47.67 |
| 2 | ಬೆಂಗಳೂರು (ಗ್ರಾ) | 20.66 | 53.63 | 423.29 |
| 3 | ಚಿತ್ರದುರ್ಗ | 28.71 | 574.65 | 933.36 |
| 4 | ಕೋಲಾರ | 12.35 | 198.00 | 508.35 |
| 5 | ಶಿವಮೊಗ್ಗ | 18.65 | 90.56 | 772.60 |
| 6 | ತುಮಕೂರು | 48.65 | 171.36 | 558.01 |
| 7 | ದಾವಣಗೆರೆ | 19.50 | 508.84 | 530.15 |
| 8 | ಮೈಸೂರು | 20.96 | 43.63 | 221.51 |
| 9 | ಚಿಕ್ಕಮಗಳೂರು | 22.78 | 208.32 | 577.50 |
| 10 | ದಕ್ಷಿಣ ಕನ್ನಡ | 32.88 | 16.72 | 223.60 |
| 11 | ಹಾಸನ | 26.18 | 27.30 | 368.48 |
| 12 | ಮಂಡ್ಯ | 25.35 | 38.91 | 66.03 |
| 13 | ಚಾಮರಾಜನಗರ | 25.20 | 165.58 | 192.03 |
| 14 | ಉಡುಪಿ | 21.04 | 26.94 | 138.98 |
| 15 | ಬೆಳಗಾಂ | 6.13 | 134.97 | 495.50 |
| 16 | ಉತ್ತರ ಕನ್ನಡ | 13.27 | 56.74 | 246.01 |

| | | | | |
|---|---|---|---|---|
| 17 | ಬಾಗಲಕೋಟೆ | – | 102.39 | 281.89 |
| 18 | ಬಳ್ಳಾರಿ | – | 165.16 | 167.32 |
| 19 | ಬೀದರ್ | – | 84.66 | 84.66 |
| 20 | ಬಿಜಾಪುರ | – | 189.53 | 496.28 |
| 21 | ಕೊಡಗು | – | 44.62 | 313.62 |
| 22 | ಧಾರವಾಡ | – | 12.77 | 12.77 |
| 23 | ಗದಗ್ | – | 55.02 | 56.92 |
| 24 | ಗುಲ್ಬರ್ಗಾ | – | 170.30 | 341.05 |
| 25 | ಹಾವೇರಿ | – | 206.28 | 207.68 |
| 26 | ಕೊಪ್ಪಳ | – | 163.22 | 368.34 |
| 27 | ರಾಯಚೂರು | – | 40.45 | 40.45 |
| 28 | ಅಪರನಿರ್ದೇಶಕರು ತಾಳೆಬೆಳೆ (ಬೆಂ) | – | | 257.33 |
| 29 | ಕಾಯ್ದಿರಿಸಿದ ಮೊತ್ತ | | | 3683.00 |
| | ಒಟ್ಟು | 356.47 | 3584.10 | 12614.42 |

114 (228) ಶ್ರೀ ಬಸವರಾಜ್ ರಾಯರೆಡ್ಡಿ (ಯಲ್‌ಬುರ್ಗ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) 2006–07ನೇ ಸಾಲಿನಲ್ಲಿ ಈವರೆವಿಗೆ ಯಾವ ಯಾವ ವರ್ಗದ ರೈತರಿಗೆ ಬೀಜ ಮತ್ತು ಗೊಬ್ಬರಕ್ಕಾಗಿ ಸಹಾಯಧನ ಒದಗಿಸಲಾಗಿದೆ ; ಇದರ ಪ್ರಯೋಜನವನ್ನು ಪಡೆದ ಫಲಾನುಭವಿಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

ಆ) ಈ ಕಾರ್ಯಕ್ರಮಕ್ಕಾಗಿ ಸರ್ಕಾರದಿಂದ ಒದಗಿಸಲಾದ ಒಟ್ಟು ಅನುದಾನವೆಷ್ಟು, ಆ ಪೈಕಿ ರೈತರಿಗೆ ವಿತರಿಸಲಾದ ಅನುದಾನವೆಷ್ಟು (ಜಿಲ್ಲಾವಾರು ಮಾಹಿತಿಯನ್ನು ನೀಡುವುದು);

ಇ) ಬೀಜ ಮತ್ತು ಗೊಬ್ಬರವನ್ನು ಯಾವ ಯಾವ ಸಂಸ್ಥೆಗಳಿಂದ ಪಡೆದು ವಿತರಿಸಲಾಗುವುದು ಹಾಗೂ ಸಂಸ್ಥೆಗಳನ್ನು ಆಯ್ಕೆ ಮಾಡುವಾಗ ಅನುಸರಿಸಲಾದ ಕ್ರಮವೇನು;

ಈ) ವಿತರಣೆಗೆ ಮುಂಚೆ ಬೀಜಗಳ ಗುಣಮಟ್ಟವನ್ನು ಯಾವ ರೀತಿ ಪ್ರಯೋಗಕ್ಕೆ ಒಳಪಡಿಸಲಾಗುವುದು ;